Sri D. DEVARAJ URS (Chief Minister).—

(*a*) Yes.

(*b*) No, the actual pay drawn by the local candidates is protected under the rules made in 1970.

(*c*) There is no discrimination as the circumstances in 1965 and 1970 were different and all local candidates governed by the rules made in 1970 are treated alike.

ಶ್ರೀ ಜಿ. ಪಿ. ನಂಜಯ್ಯನಮಠ್.—(ಇ)ಗೆ ಉತ್ತರವಾಗಿ 1965ರಲ್ಲಿನ ಹಾಗೂ 1970ರಲ್ಲಿನ ಸಂದರ್ಭಗಳು ಭಿನ್ನವಾಗಿದ್ದು ಆ ಬಗ್ಗೆ ತಾರತಮ್ಯವೇನಿಲ್ಲವೆಂದು ಹೇಳಿದೆ. ಆ ಸಂದರ್ಭಗಳು ಯಾವುವು ?

ಶ್ರೀ ಡಿ. ದೇವರಾಜ ಅರಸ್.—1965ನೇ ಇಸವಿಯಲ್ಲಿ ಸರ್ಕಾರದವರು ಒಂದು ತೀರ್ಮಾನ ತೆಗೆದುಕೊಂಡು ರೋಕರ್ ಕ್ಯಾಂಡಿಡೇಟ್ಸನ್ನು ಅಬ್‌ಸಾರ್ಬ್ ಮಾಡಿದರು. ರೆಗ್ಯುಲರೈಜ್ ಮಾಡಿದರು. ಆ ಸಂದರ್ಭಕ್ಕೆ ಆಗಿದ್ದಂಥ ರೂಲ್ಸ್ ಪ್ರಕಾರ ಕೆಲವರಿಗೆ ಪೇಸ್ಕೇಲ್ಸ್, ಇನ್‌ಕ್ರಿಮೆಂಟ್ ಏರ್ಪಾಡೊರೆಯಿತು. ಆಗ ಇವೆಲ್ಲವನ್ನೂ ಗೌರನ್ ಮಾಡುವ ರೂಲ್ಸ್ ಇತ್ತು. 1965ರ ಮೇಲೆ ಮತ್ತೆ ರೋಕರ್ ಕ್ಯಾಂಡಿಡೇಟ್ಸ್‌ನ್ನು ತೆಗೆದುಕೊಳ್ಳುವ ವ್ಯವಸ್ಥೆ ಮುಂದುವರೆಯಿತು. ಕಾರಣವೇನೇ ಇರಲಿ ಆಗ ಅನಿವಾರ್ಯವಿತ್ತು. ಅದನ್ನು ಮುಂದುವರಿಸಿದರು. ಅದು ಮತ್ತೆ 1969-70 ರವರೆಗೂ ನಡೆಯಿತು. 1970ರಲ್ಲಿ ಮತ್ತೆ ರೋಕರ್ ಕ್ಯಾಂಡಿಡೇಟ್ಸ್ ಪುನಃ ನಮ್ಮನ್ನು ರೆಗ್ಯುಲರೈಜ್ ಮಾಡಬೇಕೆಂದು ಸರ್ಕಾರದ ಮುಂದೆ ಬಂದರೂ ಅವರನ್ನು ಮನೆಗೆ ಕಳುಹಿಸುವ ಪರಿಸ್ಥಿತಿ ಬಂತು. ಆಗ ನಾವಿರಾರು ಜನರನು ಮನೆಗೆ ಕಳುಹಿಸುವುದು ಸರಿಯುಲ್ಲವೆಂದು ಸರ್ಕಾರದವರು ಒಂದು ತೀರ್ಮಾನವನ್ನು ತೆಗೆದುಕೊಂಡು ಇವರನ್ನೆಲ್ಲಾ ರೆಗ್ಯುಲರೈಜ್ ಮಾಡಬೇಕಾದರೆ ಯಾವರೀತಿ ಮಾಡಬೇಕೆಂದು ಕ್ಯಾಬಿನೆಟ್ಟಿನಲ್ಲಿ ಡಿಸಿಷನ್ ಆಗಿ ಅವರಿಗೆ ಇರತಕ್ಕ ಸರ್ವಿಸ್ ಕಂಡೀಷನ್ಸ್ ಏನೆಂಬುದನ್ನು ಪ್ರತ್ಯೇಕವಾಗಿ ಚರ್ಚಿಸಿ ಅವರ ಬೇಸಿಕ್ ಪೇ ಅವರನ್ನು ರೆಗ್ಯುಲರೈಜ್ ಮಾಡೋಣವೆಂದು ಒಂದು ತೀರ್ಮಾನ ತೆಗೆದುಕೊಂಡು ಅದರಂತೆ ಇದುವರೆಗೂ ಸರ್ಕಾರದವರು ಮಾಡಿಕೊಂಡು ಬಂದಿದ್ದಾರೆ. ಆದ್ದರಿಂದ 1965ರಲ್ಲಿ ಇದ್ದಂಥ ಪರಿಸ್ಥಿತಿಗೂ 1970ರಲ್ಲಿ ಇದ್ದಂಥ ಪರಿಸ್ಥಿತಿಗೂ ಸರ್ಕಾರದ ತೀರ್ಮಾನದ ರೀತ್ಯ ಬೇರೆ ಬೇರೆ ಮಾಡಿತ್ತು.

Sri DIGAMBER RAO BALWANT RAO.—Does it not amount to any indiscrimination, Sir ?

Sri D. DEVARAJ URS.—In 1970, Government took a decision to adopt a particular policy for regularising the local candidates and that decision was made applicable to all the local candidates without any discrimination.

Licence to start Scooter Factory in the state

173. **Sri M. H. JAYAPRAKASH NARAYAN** (Sirsi).—

Will the Minister for Industries be pleased to state:—

(*a*) whether a licence has been granted by the Government of India to the State Government for starting a scooter factory ;

(*b*) if so, when it was granted, and the reasons for non-implementing the same ?

Sri S. M. KRISHNA (Minister for Industry).—

(*a*) No. Government of India have issued only a letter of intent to M/s. Mysore State Industrial Investment and Development Corporation Ltd., to set up a scooter factory at Bangalore.

(*b*) The project has been found to be not feasible because of the condition stipulated by the Government of India that no foreign collaboration or consultancy will be permitted.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ನನ್ನ ಪ್ರಶ್ನೆಗೆ ಕೊಟ್ಟಿರುವ ಉತ್ತರವನ್ನು ನೋಡಿದರೆ, ಸರ್ಕಾರದಲ್ಲಿ ಖಾಸಗಿಯವರಿಂದಲೂ ಸ್ಕೂಟರುಗಳನ್ನು ತಯಾರು ಮಾಡುವ ಕಾರ್ಖಾನೆಯನ್ನು ಈ ರಾಜ್ಯದಲ್ಲಿ ತೆರೆಯುವ ಅವಶ್ಯಕತೆ ಇಲ್ಲವೆಂದು ಅರ್ಥವಾಗುತ್ತದೆ. ಈ ಸ್ಕೂಟರ್‌ಗಳಿಗಾಗಿ ಇರತಕ್ಕ ಡಿಮ್ಯಾಂಡ್ ಈಗ ಬಹಳ ಇದೆಯೆಂಬುದನ್ನು ಸಭೆಗೆ ತಿಳಿಸಬೇಕಾದರೆ ನನ್ನಲ್ಲಿ 10–6 ವರ್ಷಗಳ ಪಟ್ಟಿಯೂ ಕೂಡ ಇದೆ. ಈ ರಾಜ್ಯದಲ್ಲಿ ಸ್ಕೂಟರುಗಳನ್ನು ತಯಾರು ಮಾಡುವವರ ಬಗ್ಗೆ ಒಂದು ಪ್ರೊವಿಯಾರಿಟಿ ಲಿಸ್ಟ್ ಸಹ ತಯಾರುಮಾಡಲಾಗಿದೆ. ಇದಕ್ಕೆ ನಾವು ಕೊಡುವ ಕಂಟ್ರೋಲ್ ರೇಟಿಗೂ, ಹೊರಗಡೆ ಇರುವ ರೇಟಿಗೂ ಅಜಗಜಾಂತರ ವ್ಯತ್ಯಾಸವಿದೆ. ಅದಕ್ಕಾಗಿ ಇಲ್ಲಿಯೇ ಆ ಕಾರ್ಖಾನೆಯನ್ನು ತೆರೆಯಲು ಯೋಚನೆ ಮಾಡುತ್ತೀರಾ ?

† ಶ್ರೀ ಎಸ್. ಎಂ. ಕೃಷ್ಣ.—ಈ ಸ್ಕೂಟರ್ ಪ್ರಾಜೆಕ್ಟ್‌ಗೆ 263 ಲಕ್ಷ ರೂಪಾಯಿಗಳು ಖರ್ಚಾಗುತ್ತದೆ. ಮೈಸೂರು ಇಂಡಸ್ಟ್ರಿಯಲ್ ಇನ್‌ವೆಸ್ಟ್‌ಮೆಂಟ್ ಅಂಡ್ ಡೆವಲಪ್‌ಮೆಂಟ್ ಕಾರ್ಪೊರೇಷನ್ನಿಗೆ ಕೇಂದ್ರಸರ್ಕಾರದವರು ಲೆಟರ್ ಆಫ್. ಇಂಟೆಂಟನ್ನು ಈಗಾಗಲೇ ಕೊಟ್ಟಿದ್ದಾರೆ. ನಾವೂ ಸಹ ಮೈಸೂರು ಸರ್ಕಾರವ ಜೊತೆಗೆ ಸೇರಿಕೊಂಡು ಬಂಡವಾಳ ಹಾಕಿ ಈ ಕಾರ್ಖಾನೆಯನ್ನು ಸ್ಥಾಪಿಸಬಹುದು. ಅದಕಾರಣ ಮಾನ್ಯ ಶ್ರೀ ಜಯಪ್ರಕಾಶ್ ನಾರಾಯಣ್ ಅವರೂ ಸಹ ಮುಂದೆ ಬಂದರೆ, ಆಗ ನಾವು, ನೀವೂ ಸರ್ಕಾರದವರು ಎಲ್ಲರೂ ಸೇರಿ ಈ ಕಾರ್ಖಾನೆಯನ್ನು ಸ್ಥಾಪನೆ ಮಾಡಬಹುದು.

Sri B. B. SAYANAK.—Whether Government is aware that there was a report in Marathi and English Newspapers that one Mr. T. C. Shah of Nippani is going to start a Scooter factory in Belgaum and he has got the licence also.

Sri S. M. KRISHNA.—It is a fact that Sri T. C. Shah have evinced some interest in this scooter project.

ಶ್ರೀ ಎಸ್. ವೈ. ಪಾಟೀಲ್.—ಮಾನ್ಯ ಶ್ರೀ ಜಯಪ್ರಕಾಶ್ ನಾರಾಯಣ್ ಅವರು ಮುಂದೆ ಬಂದರೆ ತಾವೂ, ನಾವೂ ಕೂಡ ಸೇರಿಕೊಂಡು ಮಾಡೋಣವೆಂದು ಹೇಳಿದಿರಿ. ಸರ್ಕಾರ ಮಾಡುವ ಕೆಲಸವನ್ನು ವ್ಯಕ್ತಿ ಹೇಗೆ ಮಾಡುತ್ತಾರೆ ? ಅದರ ಬಗ್ಗೆ ತಮ್ಮ ಧೋರಣೆಯೇನು ?

ಶ್ರೀ ಎಸ್. ಎಂ. ಕೃಷ್ಣ.—ಸರ್ಕಾರದಲ್ಲಿ ಸಾಕಷ್ಟು ಹಣವಿದ್ದಿದ್ದರೆ ಬಹಳ ಸಂತೋಷದಿಂದ ಎರಡೂ ಬಂಡವಾಳವನ್ನು ಹಾಕಿ ಕಾರ್ಖಾನೆಯನ್ನು ಪ್ರಾರಂಭಮಾಡುವುದಕ್ಕೆ ಪ್ರಯತ್ನ ಮಾಡಬಹುದಾಗಿತ್ತು. ಸರ್ಕಾರದಲ್ಲಿ ಈಗ ಸಾಕಾದಷ್ಟು ಹಣವಿಲ್ಲ. ಆದ್ದರಿಂದ ಇದನ್ನು ಪಾಯಿಂಟ್ ಸೆಕ್ಟರ್‌ನಲ್ಲಿ ಮಾಡಬೇಕೆಂದು ತೀರ್ಮಾನಮಾಡಿದೆ.

ಶ್ರೀ ಎಚ್. ಡಿ. ದೇವೇಗೌಡ.—ಕೇಂದ್ರಸರ್ಕಾರದವರು ಲೆಟರ್ ಆಫ್ ಇಂಟೆಂಟನ್ನು ಆ ಒಂದು ಸಂಸ್ಥೆಗೆ ಕೊಟ್ಟಿದ್ದಾರೆ. ಅವರು ಇದು ಫೀಜಿಬಲ್ ಆಗುವುದಿಲ್ಲವೆಂದು ಹೇಳಿದ್ದಾರೆಯೇ ? ಫೀಜಿಬಲ್ ಆಗುವುದಿಲ್ಲವೆಂದು ಹೇಳಿದಮೇಲೆ ಇವರು ಪ್ರಾಜೆಕ್ಟ್ ರಿಪೋರ್ಟ್ ತಯಾರುಮಾಡಿ ಕಳುಹಿಸಿದ್ದಾರೆ. ಇವರ ಲೆಟರ್ ಪ್ರಕಾರವೇನಾದರೂ ಇದು ಫೀಜಿಬಲ್ ಆಗಿದೆಯೇ ?

ಶ್ರೀ ಎಸ್. ಎಂ. ಕೃಷ್ಣ.—ನಾವು ಪ್ರಾಜೆಕ್ಟ್ ರಿಪೋರ್ಟ್ ಸ್ಟಡಿ ಮಾಡಿದಾಗ ಇದರ ಬಗ್ಗೆ ಕೇಂದ್ರಸರ್ಕಾರಕ್ಕೆ ಫಾರಿನ್ ಕೊಲಾಬೊರೇಷನ್ ಸಿಕ್ಕಿದರೆ ಅನುಕೂಲವಾಗುತ್ತದೆಂದು ನಾವು ಪ್ರಾರ್ಥನೆ ಮಾಡಿಕೊಂಡಿದ್ದೆವು. ಆದರೆ ಕೇಂದ್ರಸರ್ಕಾರದವರು ಲೆಟರ್ ಆಫ್ ಇಂಟೆಂಟನ್ನು ಒಂದು ಷರತ್ತಿನಮೇಲೆ ಕೊಟ್ಟಿದ್ದಾರೆ. ಇದು ಶೇಕಡ ನೂರಕ್ಕೆ ನೂರು ಇಂಡಿಜನಸ್ ಪ್ರಾಜೆಕ್ಟ್ ಆಗಬೇಕು. ಫಾರಿನ್ ಕೊಲಾಬೊರೇಷನ್ ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದ್ದಾರೆ. ಇಂತಹ ತೊಂದರೆಗಳು ಈಗ ಈ ಬಗ್ಗೆ ಉದ್ಭವವಾಗಿವೆ.

ಶ್ರೀ ಗೋಪಿನಾಥ್ ಆರ್. ಸಾಂದ್ರ.—ಒಂದುವೇಳೆ ಖಾಸಗೀ ಉದ್ದಿಮೆಗಾರರು ಸಿಕ್ಕಿದರೆ, ಈ ಕಾರ್ಖಾನೆಯನ್ನು ತೆರೆಯಲು ಎರ್ಲಾ ತರಹ ಸೌಕರ್ಯಗಳನ್ನು ಒದಗಿಸಬಲ್ಲರಾ ?

ಶ್ರೀ ಎಸ್. ಎಂ. ಕೃಷ್ಣ.—ಎರ್ಲಾ ವಿಧವಾದ ಸೌಲಭ್ಯಗಳನ್ನು ಒದಗಿಸುತ್ತೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಸ್ಮಾಲ್ ಸ್ಕೇಲ್ ಕಾರ್ಖಾನೆಯನ್ನು ಇಲ್ಲಿ ಆರಂಭಿಸುವುದು ಬಹಳ ಸಂತೋಷ. ಬಡವರಿಗೆ ಈ ಒಂದು ಅವಕಾಶವನ್ನು ಕೊಡುವ ಯೋಚನೆಯನ್ನು ಮಾಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.— ಈ ಪ್ರಶ್ನೆ ಈಗ ಉದ್ಭವಿಸುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಈ ಸ್ಮಾಲ್ ಸ್ಕೇಲ್ ಕಾರ್ಖಾನೆಯನ್ನು ತೆರೆಯಲು ಬಂಡವಾಳ ಗಾರರು ಯಾರು ತಮಗೆ ಅರ್ಜಿ ಹಾಕಿದ್ದಾರೆ ? ಈ ಕಾರ್ಖಾನೆಯನ್ನು ತೆರೆಯಲು ಇದುವರೆಗೆ ಎಷ್ಟು ಅರ್ಜಿಗಳು ಸರ್ಕಾರಕ್ಕೆ ಬಂದಿವೆ ? ತಾವು ಯಾರಿಗೆ ಕೊಡಬೇಕೆಂದು ತೀರ್ಮಾನಮಾಡಿದ್ದೀರಿ ?

ಶ್ರೀ ಎಸ್. ಎಂ. ಕೃಷ್ಣ.—ಯಾವ ಅರ್ಜಿಗಳೂ ಅದಕ್ಕಾಗಿ ಇದುವರೆಗೆ ಬಂದಿಲ್ಲ. ಅಡ್ವರ್ಟೈಜ್ ಒಂದೂ ಮಾಡಿಲ್ಲ. ಆ ಬಗ್ಗೆ ಎಲ್ಲ ಪ್ರಯತ್ನಗಳನ್ನು ಮಾಡಿದ್ದೇವೆ. ಯಾರಾದರೂ ಮುಂದೆ ಬಂದರೆ, ಅವರ ಇರಾದೆಯನ್ನು ಕೂಡ ನಾವು ಗಮನದಲ್ಲಿಟ್ಟುಕೊಂಡು ಆಮೇಲೆ ತೀರ್ಮಾನ ಮಾಡುತ್ತೇವೆ.

Area of Operation of Malaprabha Co-operative Sugar Factory, Mugatkan

183. Sri VIRUPAKSHA M. GHADI (Haliyal).—

Will the Minister for Co-operation be pleased to state :—

(*a*) whether it is a fact that the Haliyal taluk was included in the area of operation of Malaprabha Co-operative Sugar Factory, Mugatkan, Hubli and share amounts were collected from some cultivators ;

(*b*) whether it is a fact that the Haliyal taluk is likely to be excluded and the share amount refunded ?

Sri A. SHANKARA ALVA (Minister for Co-operation).—

(*a*) It is not a fact that Haliyal taluk was included in the area of operation of the Malaprabha Co-operative Sugar Factory Ltd., Mugatkan, Hubli, however share amounts have been collected from some cultivators of Haliyal Taluk.

(*b*) In view of the reply to the sub-question (*a*) the question of excluding Haliyal Taluk from the area of operation of the said factory does not arise, and it is for the factory to take, appropriate action to refund the share amount collected from cultivators of Haliyal taluk.

ಶ್ರೀ ವಿರೂಪಾಕ್ಷ ಎಂ. ಘಾಡಿ.—ಸ್ವಾಮಿ ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಹಳಿಯಾಳ ತಾಲ್ಲೂಕನ್ನು ಮುಗಟಖಾನ್ ಹುಬ್ಬಳ್ಳಿಯ ಮಲಪ್ರಭಾ ಸಹಕಾರ ಸಕ್ಕರೆ ಕಾರ್ಖಾನೆ ಪ್ರದೇಶದ ವ್ಯಾಪ್ತಿಯಲ್ಲಿ ಸೇರಿಸಿಲ್ಲ ನಿಜವಲ್ಲ ಎಂದು ಹೇಳಿದ್ದೀರಿ, ಆಮೇಲೆ (ಆ) ಪ್ರಶ್ನೆಗೆ ಕೊಟ್ಟಿರುವ ಉತ್ತರದಲ್ಲಿ ಅದನ್ನು ಸದರಿ ಕಾರ್ಖಾನೆಯ ಪ್ರದೇಶದ ವ್ಯಾಪ್ತಿಯಿಂದ ಕೈಬಿಡುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಹೇಳಿದ್ದೀರಿ ಎಂದರೆ ಅದನ್ನು ಸೇರಿಸುತ್ತೀರಿ ಎಂದು ಅರ್ಥವಾಗುತ್ತದೆ ಅಲ್ಲವೇ ?